ಪ್ರತಿನಿಧಿಸಿದ್ದ ಶ್ರೇಯಾಂಕಾ ಈಶಾನ್ಯ ವಲಯ ವಿರುದ್ಧ ಪಂದ್ಯದಲ್ಲಿ ನಾಲ್ಕು ವಿಕೆಟ್ ಕಬಳಿಸಿದ್ದರು. ಕಳೆದ ವರ್ಷ ಅರುಣಾಚಲ ಪ್ರದೇಶ ಎದುರಿನ ಪಂದ್ಯದಲ್ಲಿ ಅರ್ಧಶತಕ ಬಾರಿಸಿದ್ದು, 'ಲಿಸ್ಟ್ ಎ' ಮಾದರಿಯಲ್ಲಿ ಅವರು ಗಳಿಸಿದ ಮೊದಲ ಅರ್ಧಶತಕವಾಗಿತ್ತು.

ಮಹಿಳಾ ಪ್ರೀಮಿಯರ್ ಲೀಗ್ ಆರಂಭವಾದಾಗ ಕಳೆದ ವರ್ಷ ಅವರನ್ನು ಆರ್‌ಸಿಬಿ ₹10 ಲಕ್ಷಕ್ಕೆ ಖರೀದಿಸಿತ್ತು. 32ರ ಸರಾಸರಿಯಲ್ಲಿ ಏಳು ಪಂದ್ಯಗಳಿಂದ ಆರು ವಿಕೆಟ್ ಕಬಳಿಸಿದ್ದರೂ ಈ ಸಾಧನೆ ಎಲ್ಲರ ಗಮನ ಸೆಳೆದಿರಲಿಲ್ಲ. ಅದೇ ವರ್ಷ ಮಹಿಳೆಯರ ಕೆರಿಬಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಆಡಿ ಟೂರ್ನಿಯಲ್ಲಿ ಹೆಚ್ಚು ವಿಕೆಟ್ ಪಡೆದ ಅಗ್ರಮಾನ್ಯ ಬೌಲರ್ ಎನಿಸಿಕೊಂಡರು. 2023ರಲ್ಲಿ ಎಸಿಸಿ ಮಹಿಳಾ ಟಿ20 ಏಷ್ಯಾ ಕಪ್‌ನಲ್ಲಿ ಹೆಚ್ಚು ವಿಕೆಟ್ ಪಡೆದಿದ್ದರು. ನಾಲ್ಕು ತಿಂಗಳ ಹಿಂದೆಯಷ್ಟೇ ಇಂಗ್ಲೆಂಡ್ ಎದುರಿನ ಕ್ರಿಕೆಟ್ ಸರಣಿಗೆ ಮೊದಲ ಬಾರಿಗೆ ಭಾರತ ತಂಡಕ್ಕೆ ಆಯ್ಕೆಯಾದರು. ಪದಾರ್ಪಣೆ ಅಂತರರಾಷ್ಟ್ರೀಯ ಪಂದ್ಯದಲ್ಲಿ ಎರಡು ವಿಕೆಟ್ ಕಬಳಿಸಿದರು. ಬಳಿಕ ಏಕದಿನ ತಂಡದಲ್ಲಿ ಆಸ್ಟ್ರೇಲಿಯಾ ಎದುರು ಏಕದಿನ ಸರಣಿಯಲ್ಲಿ ಅವಕಾಶ ಗಳಿಸಿದರು.

ಈ ಸಲದ ಮಹಿಳಾ ಪ್ರೀಮಿಯರ್ ಲೀಗ್‌ನಲ್ಲೂ ಎಂಟು ಪಂದ್ಯಗಳಿಂದ 13 ವಿಕೆಟ್ ಕಬಳಿಸಿದ್ದರು. ಈ ಎಲ್ಲ ಸಾಧನೆಗಳ ತೂಕ ಒಂದಾದರೆ, 'ಈ ಸಲ ಕಪ್ ನಮ್ದು' ಎಂದು ಹೆಮ್ಮೆಯಿಂದ ಬೀಗುವಂತೆ ಮಾಡಿದ ಫೈನಲ್ ಯಶಸ್ಸಿನಲ್ಲಿ ಶ್ರೇಯಾಂಕಾ ಪಡೆದ ಮಹತ್ವದ ನಾಲ್ಕು ವಿಕೆಟ್‌ಗಳ ಕೈ ಚಳಕ ಅವರ ಬದುಕಿಗೆ ಹೊಸ ಇಂಬು ನೀಡಿದೆ.

ಮಹಿಳಾ ಕ್ರಿಕೆಟ್ ಇತ್ತೀಚೆಗಿನ ವರ್ಷಗಳಲ್ಲಿ ವೇಗವಾಗಿ ಮುನ್ನೆಲೆಗೆ ಬರುತ್ತಿದೆ. ಹೀಗಾಗಿ ದೇಶವನ್ನು ಪ್ರತಿನಿಧಿಸಿದರೂ ಅವರ ಸಾಧನೆ, ಶ್ರಮ ಜನರಿಗೆ ಗೊತ್ತಾಗುವುದು ಕಡಿಮೆಯೇ. ಮಹಿಳಾ ಪ್ರೀಮಿಯರ್ ಲೀಗ್‌ಗೂ ಮೊದಲು ಶ್ರೇಯಾಂಕಾ ಭಾರತ ತಂಡದಲ್ಲಿ ಆಡಿದ್ದರೂ ಗಮನಸೆಳೆದಿರಲಿಲ್ಲ. ಲೀಗ್‌ನಲ್ಲಿ ಅವರು ತೋರಿದ ಪ್ರದರ್ಶನ ಹಾಗೂ ಟೂರ್ನಿಗೆ ಇರುವ 'ನಮ್ಮ ಆರ್‌ಸಿಬಿ' ಎನ್ನುವ ಹೆಮ್ಮೆ ರಾಜ್ಯದ ಆಟಗಾರ್ತಿಗೆ ದೊಡ್ಡ ಗೌರವ ತಂದುಕೊಟ್ಟಿದೆ.



ಹತ್ತು ವರ್ಷಗಳ ಹಿಂದೆ ಕ್ರೀಡಾಂಗಣದ ಗ್ಯಾಲರಿಯಲ್ಲಿ 'ಆರ್‌ಸಿಬಿ, ಆರ್‌ಸಿಬಿ' ಎಂದು ತಮ್ಮೂರಿನ ಐಪಿಎಲ್ ತಂಡವನ್ನು ಬೆಂಬಲಿಸುತ್ತ, ಚಪ್ಪಾಳೆ ಹೊಡೆಯುತ್ತಿದ್ದ ಶ್ರೇಯಾಂಕಾ ಈಗ ತಮ್ಮದೇ ಅಭಿಮಾನಿ ಬಳಗ ಸೃಷ್ಟಿಸಿಕೊಂಡಿದ್ದಾರೆ. ಕೋಟ್ಯಂತರ ಅಭಿಮಾನಿಗಳು 'ಶ್ರೇಯಾಂಕಾ ಕನ್ನಡತಿ' ಎನ್ನುವ ಹೆಮ್ಮೆಯ ಭಾವದಿಂದ ಬೀಗುತ್ತಿದ್ದಾರೆ. ಪದವಿ ಪೂರ್ಣಗೊಳಿಸುವ ಹಂತದಲ್ಲಿರುವ ಅವರಿಗೆ ಆರ್‌ಸಿಬಿ ತಂಡ ಹಾಗೂ ವಿರಾಟ್ ಕೊಹ್ಲಿ ಎಂದರೆ ವಿಶೇಷ ಅಕ್ಕರೆ. ಕೊಹ್ಲಿ ಅವರನ್ನೇ ಬದುಕಿನ ಆದರ್ಶವೆಂದುಕೊಂಡು ಸಾಧನೆಯ ಹಾದಿಯಲ್ಲಿ ಸಾಗುತ್ತಿದ್ದಾರೆ.

## ನೆರವಾದ ಪುರುಷರ ಬ್ಯಾಟಿಂಗ್

ಶ್ರೇಯಾಂಕಾ ಸಾಧನೆಗೆ ಈಗ ವ್ಯಕ್ತವಾಗುತ್ತಿರುವ ಪ್ರಶಂಸೆ ಹಿಂದೆ ಸಾಕಷ್ಟು ಪರಿಶ್ರಮ, ಬದ್ಧತೆಯಿದೆ. ನೋವಿನ ಕಹಿ ನೆನಪುಗಳಿವೆ. ಬೆಂಗಳೂರು ಸೇರಿದಂತೆ ಹಲವೆಡೆ ಕಾರ್ಪೊರೇಟ್ ಟೂರ್ನಿಗಳಲ್ಲಿ ಆಡಿರುವ ಅವರು ಅಲ್ಲಿ ಪುರುಷರಿಗೆ ಬೌಲಿಂಗ್ ಮಾಡುತ್ತಿದ್ದರು. ಫುಟ್‌ಬಾಲ್ ಆಟಗಾರ ಸುನಿಲ್ ಚೆಟ್ರಿ ಕ್ರಿಕೆಟ್ ಆಡಲು ಬಂದಾಗ ಅವರಿಗೂ ಬೌಲ್ ಮಾಡಿದ್ದಾರೆ. ಆಗ ಸಾಕಷ್ಟು ಬೌಂಡರಿ ಹಾಗೂ ಸಿಕ್ಸರ್‌ಗಳು ಸಿಡಿದಿವೆ. ಪ್ರತಿ ಎಸೆತದಿಂದಲೂ ಪಾಠ ಕಲಿತಿದ್ದರ ಫಲವೇ ಡಬ್ಲ್ಯುಪಿಎಲ್‌ನಲ್ಲಿ ಪ್ರತಿಫಲಿಸಿದೆ.

ರಾಜ್ಯ ತಂಡದಲ್ಲಿ ಮೇಲಿಂದ ಮೇಲೆ ಅವಕಾಶಗಳು ಸಿಗುತ್ತಿದ್ದ ಸುವರ್ಣ ಸಂದರ್ಭದಲ್ಲಿಯೇ ಅವರು ಬೆನ್ನು ನೋವಿನ ಗಾಯಕ್ಕೆ ಒಳಗಾಗಿದ್ದರಿಂದ ಆರು ತಿಂಗಳು ಕ್ರಿಕೆಟ್‌ನಿಂದ ದೂರವಿರಬೇಕಾಯಿತು. ಪೂರ್ಣವಾಗಿ ಚೇತರಿಸಿಕೊಳ್ಳುವ ಹೊತ್ತಿಗೆ ಕೋವಿಡ್ ಹಾಗೂ ಲಾಕ್‌ಡೌನ್ ಶುರುವಾಗಿತ್ತು. ಹೀಗಾಗಿ ಅವರು ಅಭ್ಯಾಸಕ್ಕೂ ಅವಕಾಶವಿಲ್ಲದಂತೆ ಇರಬೇಕಾಯಿತು.

ಗಾಯದಿಂದ ಚೇತರಿಸಿಕೊಳ್ಳುವ ಹೊತ್ತಿನಲ್ಲಿ ಮಾನಸಿಕವಾಗಿ ಬೇಸತ್ತಿದ್ದ ಶ್ರೇಯಾಂಕಾಗೆ ಕೋಚ್ ಅರ್ಜುನ್ ದೇವ್ ನೆರವಾದರು. ಫೋನ್ ಮೂಲಕವೇ ಮನೆಯಿಂದ ಅಭ್ಯಾಸ ಮಾಡುವ ವಿಧಾನ ಹೇಳಿಕೊಟ್ಟರು. ಡಬ್ಲ್ಯುಪಿಎಲ್ ಬಳಿಕ ಅವರ ಮೇಲೆ ನಿರೀಕ್ಷೆಗಳೂ ಹೆಚ್ಚಾಗಿವೆ. ಭಾರತ ತಂಡಕ್ಕೆ ವಿಶ್ವಕಪ್ ತಂದುಕೊಡಬೇಕು, ಒಲಿಂಪಿಕ್ಸ್‌ನಲ್ಲಿ ಮಹಿಳಾ ತಂಡ ಚಿನ್ನದ ಪದಕ ಗೆಲ್ಲುವಂತಾಗಬೇಕು ಎನ್ನುವುದು ಅವರ ಆಸೆ.

ಸ್ಮೃತಿ ಮಂದಾನ ಅವರಂಥ ಶಾಂತ ಸ್ಥಿತಿ, ವಿರಾಟ್ ಕೊಹ್ಲಿ ಅವರ ಹಾಗೆ ಆಕ್ರಮಣಕಾರಿ ಸ್ವಭಾವ ಕಲಿಯಬೇಕು ಎನ್ನುವ ಆಸೆ ಹೊಂದಿರುವ ಅವರು 'ಪ್ರತಿ ಪಂದ್ಯವೂ ಬದುಕಿನ ಅವಕಾಶ' ಎನ್ನುವಂತೆ ಆಡುತ್ತಿದ್ದಾರೆ. ಇಂಥ ಶ್ರಮಜೀವಿಗಳ ಪ್ರತಿಭೆಗಳಿಂದಲೇ ಮಹಿಳಾ ಕ್ರಿಕೆಟ್ ದೇಶದಲ್ಲಿ ವೇಗವಾಗಿ ಬೆಳೆಯುತ್ತಿದೆ.

ಶ್ರೇಯಾಂಕಾ ಬದುಕು ಕಳೆದಿದ್ದು, ಕ್ರಿಕೆಟ್ ಜೀವನ ರೂಪಿಸಿಕೊಂಡಿದ್ದು ಬೆಂಗಳೂರು ಆದರೂ ಅವರ ತಂದೆ ಹಾಗೂ ಪೂರ್ವಜರು ಕಲಬುರಗಿ ಜಿಲ್ಲೆಯ ಕೋಳಕೂರು ಗ್ರಾಮದವರು. ವೃತ್ತಿಪರ ಕ್ರೀಡಾ ತರಬೇತಿಗೆ ಮೂಲ ಸೌಕರ್ಯಗಳ ಕೊರತೆಯಿರುವ ಭಾಗದಲ್ಲಿ ಶ್ರೇಯಾಂಕಾ ಸಾಧನೆ ಹೆಮ್ಮೆಯ ಭಾವ ಮೂಡಿಸಿದೆ. ಕ್ರೀಡೆಯಲ್ಲಿ ಸಾಧನೆ ಮಾಡಬೇಕು ಎಂದುಕೊಂಡು ಕನಸು ಕಟ್ಟಿಕೊಂಡ ಯುವತಿಯರಿಗೆ ಇವರ ಬದುಕು ಪ್ರೇರಣೆಯ ಕಥನವಾಗಲಿ. ಶ್ರೇಯಾಂಕಾ ಕೈಚಳಕಕ್ಕೆ ನಿರಂತರವಾಗಿ 'ವಿಕೆಟ್‌ಗಳು' ಉರುಳುತ್ತಲೇ ಇರಲಿ.

ಪ್ರತಿಕ್ರಿಯಿಸಿ: feedback@sudha.co.in


